ಸೆಲೆಬ್ರಿಟಿ

■ ಹನಿ

## ಅರೆ ಭಾರತೀಯೆ!



**ಕತ್ರೀನಾ** ಕೈಫ್ ತನ್ನ ಮಾತನ್ನು ತಾನೇ ನುಂಗಿಕೊಂಡಿದ್ದಾಳೆ. ರಾಹುಲ್ ಗಾಂಧಿಯ ಬಗ್ಗೆ ಮಾಡಿದ ಕಾಮೆಂಟನ್ನು ವಾಪಸ್ ಪಡೆದು ಕ್ಷಮೆ ಕೋರಿದ್ದಾಳೆ. 'ನಾನು ಅರೆ ಭಾರತೀಯೆ ಎನ್ನಲು ನನಗೆ ಸಂಕೋಚವಿಲ್ಲ. ರಾಹುಲ್ ಗಾಂಧಿಯೂ ಅರೆ ಭಾರತೀಯನಲ್ವೆ?' ಎನ್ನೋದು ಆಕೆ ಹೇಳಿದ ಮಾತು. ಅಷ್ಟಕ್ಕೇ ಕೆಲವು ಯುವ ಕಾಂಗ್ರೆಸ್ ಮುಖಂಡರು 'ಗರಂ' ಆಗಿ 'ಅದನ್ನು ಹೇಳಲು ಇವಳ್ಯಾರು?' ಎಂದು ಪ್ರಶ್ನಿಸಿ, ಕೊನೆಗೂ ಕತ್ರೀನಾ ಬಾಯ್ತುಪ್ಪಿಗೆ ಕ್ಷಮೆ ಕೋರಿದ್ದಾಳೆ.

ಬಾಲಿವುಡ್ ಸಿನಿಮಾಗಳಲ್ಲಿ ಭಾರೀ ಬೇಡಿಕೆಯಲ್ಲಿರುವ ನಟಿ ಕತ್ರೀನಾ ಕೈಫ್ (ಬರ್ತ್‌ಡೇ 16-7-84) ಮೂಲತಃ ಬ್ರಿಟನ್ ಪ್ರಜೆ. ಸದ್ಯಕ್ಕೆ ಭಾರತದಲ್ಲಿ ಆಕೆ 'ವರ್ಕಿಂಗ್ ವೀಸಾ' ಪಡೆದು ವಾಸಿಸುತ್ತಿದ್ದಾಳೆ. ಹಿಂದಿ, ತೆಲುಗು, ಮಲಯಾಳಂ ಚಿತ್ರಗಳಲ್ಲಿ ನಟಿಸಿರುವ ಈಕೆಯನ್ನು 'ಬ್ರಿಟಿಶ್ ಇಂಡಿಯನ್' ಎಂದೇ ಗುರುತಿಸಲಾಗುತ್ತದೆ. ಹಾಗೆ ನೋಡಿದರೆ ಆಕೆಯ ಜೀವನವೂ ಒಂದು ಸಿನಿಮಾ ಕಥೆಯಂತಿದೆ.

ಕಾಶ್ಮೀರಿ ಪಂಡಿತ ಅಪ್ಪನ ಹೆಸರು ಮೊಹಮ್ಮದ್ ಕೈಫ್; ಅಮ್ಮ ಇಂಗ್ಲೆಂಡಿನ ಸುಸೇನ್ ತಕೋಟೆ. ಬ್ರಿಟಿಶ್ ಪ್ರಜೆಗಳಾಗಿರುವ ಇಬ್ಬರೂ ಪ್ರೀತಿಸಿ ಮದುವೆಯಾದವರು. ಆದರೆ ಕತ್ರೀನಾ ಇನ್ನೂ ಹರೆಯ ತಲುಪುವುದಕ್ಕೆ ಮುನ್ನವೇ ಅಪ್ಪ-ಅಮ್ಮ ಡೈವೋರ್ಸ್ ಪಡೆದರು. ತಂದೆಯ ಪ್ರೀತಿಯೆಂದರೆ ಏನೆಂದೇ ಅರಿಯದೆ ಬೆಳೆದವಳು ಈ ಕ್ಯಾಟ್. 14ರ ಹರೆಯದಲ್ಲೇ 'ಕ್ಯಾಟ್‌ವಾಕ್' ಶುರು ಮಾಡಿ ಇಂಗ್ಲೆಂಡಿನ ಮಾಡೆಲಿಂಗ್ ಲೋಕದಲ್ಲಿ ಗಟ್ಟಿ ಹೆಜ್ಜೆ ಊರಿದ ಕತ್ರೀನಾ, ಲಂಡನ್ ಫ್ಯಾಶನ್ ವೀಕ್‌ನಲ್ಲಿ ಮಿಂಚಿದಾಗ ಅಲ್ಲೇ ಇದ್ದ ಬಾಲಿವುಡ್ ನಿರ್ದೇಶಕ ಕೈಜಾದ್ ಗುಸ್ತಾದ್ ಗಮನ ಸೆಳೆದಳು. ಆದರೆ ಹಿಂದಿಯ ಮೊದಲ ಚಿತ್ರ 'ಬೂಮ್' (2003) ಇನ್ನಿಲ್ಲದಂತೆ ನೆಲಕಚ್ಚಿತು. ಹಿಂದಿ ಮಾತನಾಡಲೂ ಬಾರದೆ ಬಾಲಿವುಡ್‌ನಲ್ಲಿ ಕಷ್ಟ ಪಟ್ಟು ಮೇಲೆ ಬಂದವಳೀಕೆ. 2010ರಲ್ಲಿ ಬಂದ 'ರಾಜನೀತಿ' ಸಿನಿಮಾದಲ್ಲಿ ಸೋನಿಯಾ ಗಾಂಧಿಯನ್ನು ಹೋಲುವ ಪಾತ್ರದ ಮೂಲಕ ವಿಮರ್ಶಕರ ಮೆಚ್ಚುಗೆಯೂ ಗಳಿಸಿದಾಗ ಫಿಲಂಫೇರ್ ಪ್ರಶಸ್ತಿಯೂ ಮುಡಿಗೇರಿತು. ಹಿಂದೆಲ್ಲ ಡಬ್ಬಿಂಗ್ ಧ್ವನಿ ಪಡೆಯುತ್ತಿದ್ದ ಈಕೆ ಈಗ ತನ್ನ ಪಾತ್ರಕ್ಕೆ ತಾನೇ ಧ್ವನಿ ನೀಡುತ್ತಾಳೆ.

ಒಂದರ್ಥದಲ್ಲಿ ಈಕೆ 'ಅರೆ ಜಾಗತಿಕ'ಳೂ ಹೌದು. ಲಂಡನ್ನಿನಲ್ಲಿ ಈಕೆ ವಾಸವಿದ್ದುದು ಮೂರೇ ವರ್ಷ. ಅಮ್ಮನ ಜತೆಗೆ ಹಾಂಕಾಂಗ್, ಚೀನಾ, ಜಪಾನ್, ಫ್ರಾನ್ಸ್, ಸ್ವಿಝರ್ಲಂಡ್, ಬರ್ಲಿನ್, ಬೆಲ್ಜಿಯಂ, ಹವಾಯಿ- ಹೀಗೆ ಹತ್ತಾರು ಸ್ಥಳಗಳಲ್ಲಿ ವಾಸ ಮಾಡಿದಾಕೆ ಈಗ ಮುಂಬೈಗೆ ಗಟ್ಟಿಯಾಗಿ ಅಂಟಿಕೊಂಡಿದ್ದಾಳೆ. ಇತ್ತೀಚಿನ ವರದಿಗಳನ್ನು ಗಮನಿಸಿದರೆ ಈಕೆ ಬಾಲಿವುಡ್ ನಟನನ್ನೇ ಮದುವೆಯಾಗುವ ಸಾಧ್ಯತೆಗಳು ಕಾಣಿಸುತ್ತಿವೆ. ಹಾಗಾದರೆ ಪೂರ್ಣ ಭಾರತೀಯೆ ಆಗಬಹುದೇನೊ?

## ಇನ್ನೊಬ್ಬ ಆಸ್ಕರ್!

'ಆಸ್ಕರ್' ಪ್ರಶಸ್ತಿ ಎಲ್ಲರಿಗೂ ಗೊತ್ತು. ಆದರೆ ಈ ಇನ್ನೊಬ್ಬ ಆಸ್ಕರ್ ಬಗ್ಗೆ ಬಹುತೇಕ ಜನರಿಗೆ ಗೊತ್ತಿಲ್ಲ. ಈತ ಆಸ್ಕರ್ ಪಿಸ್ಟೋರಿಯಸ್. ದಕ್ಷಿಣ ಆಫ್ರಿಕಾದ ಜೊಹಾನ್ಸ್‌ಬರ್ಗ್ ಹೊರವಲಯದ ನಿವಾಸಿ. ಆಫ್ರಿಕಾದ ಬಹುದೊಡ್ಡ ಕ್ರೀಡಾ ತಾರೆ. ವೇಗದ ಓಟದಲ್ಲಿ ಈಗ ಈತನ ಕಾಲುಗಳದ್ದೇ ಸುದ್ದಿ.

ಹಾಗೆನ್ನಲೂ ಕಾರಣವಿದೆ. ಬಾಲ್ಯದಲ್ಲೇ ಕಾಲು ಊನಗೊಂಡ ಈತನದ್ದು ಕೃತಕ ಕಾಲುಗಳು. ಮಂಡಿಯ ಕೆಳಗೆ ಕಾರ್ಬನ್ ಫೈಬರ್ ಕಾಲುಗಳನ್ನು ಸಿಕ್ಕಿಸಿಕೊಂಡು ಓಡುತ್ತಿರುವ ಈ ವಿಕಲಚೇತನ ಓಟಗಾರ, ಈಗ ಕೈಕಾಲುಗಳು ಸರಿ ಇರುವ ಇತರ ಓಟಗಾರರ ಜತೆಗೆ ಸ್ಪರ್ಧೆಗೆ ಸಿದ್ಧನಾಗಿದ್ದಾನೆ! ಮುಂದಿನ ಲಂಡನ್ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಲು ಅರ್ಹತೆ ಪಡೆದಿದ್ದಾನೆ!

ಕಳೆದ ವಾರ ಕೊರಿಯಾದ ಡೇಗ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ ಕೂಟದಲ್ಲಿ 400 ಮೀಟರ್ ಓಟವನ್ನು ಆಸ್ಕರ್ 45.07 ಸೆಕೆಂಡ್‌ಗಳಲ್ಲಿ ಓಡಿ ಹೊಸ ದಾಖಲೆ ಬರೆದಿದ್ದಾನೆ. ಯಾವುದೇ ದೇಶದ ಓಟಗಾರ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಬೇಕಿದ್ದರೆ 400



ಮೀಟರ್ ಓಟದ ಅರ್ಹತಾ ಅವಧಿ 45.25 ಸೆಕೆಂಡು! ಅಂದರೆ ಆಸ್ಕರ್ ಇನ್ನೂ 0.18 ಸೆಕೆಂಡ್ ಮುನ್ನವೇ ಓಟ ಮುಗಿಸಿದ್ದಾನೆ.

ಹಾಗೆ ನೋಡಿದರೆ ಆಸ್ಕರ್ ಪಿಸ್ಟೋರಿಯಸ್‌ಗೆ ಈ ಅರ್ಹತೆ ಅಷ್ಟು ಸುಲಭವಾಗಿ ಬರಲಿಲ್ಲ. ಯಾಂತ್ರಿಕ ಕಾಲುಗಳನ್ನು ಜೋಡಿಸಿಕೊಂಡವರು ಸಹಜ ಕಾಲುಗಳ ಓಟಗಾರರ ಜತೆ ಸ್ಪರ್ಧಿಸುವಂತಿಲ್ಲ ಎಂದು ಕ್ರೀಡಾನಿಯಮವೇ ಇತ್ತು. 2008ರ ಸಮ್ಮರ್ ಒಲಿಂಪಿಕ್ಸ್‌ನಲ್ಲಿ ಈತನಿಗೆ ಭಾಗವಹಿಸಲು ಅನುಮತಿ ನೀಡಿದಾಗ ಇದೇ ನಿಯಮವನ್ನು ಉಲ್ಲೇಖಿಸಿ ಕೆಲವರು ಕೋರ್ಟ್ ಮೆಟ್ಟಿಲು ಹತ್ತಿ ತಡೆ ಒಡ್ಡಿದ್ದರು. ಇದೀಗ ಕ್ರೀಡಾ ನ್ಯಾಯಾಲಯದ ತೀರ್ಪು ಆಸ್ಕರ್ ಪರವಾಗಿ ಬಂದಿದೆ. ಆದರೆ ದ.ಆಫ್ರಿಕಾ ತನ್ನ 400 ಮೀಟರ್ ಓಟದ ಅಥವಾ ರಿಲೇ ಓಟದ ತಂಡದಲ್ಲಿ ಈತನನ್ನು ಸೇರಿಸಿಕೊಳ್ಳುತ್ತದೋ ಇಲ್ಲವೋ ಅನ್ನುವುದು ಗೊತ್ತಿಲ್ಲ. 26ರ ಹರೆಯದ ಆಸ್ಕರ್ (ಬರ್ತ್‌ಡೇ 22-11-86) ಈಗಾಗಲೆ ವಿಕಲಚೇತನರ ಸ್ಪ್ರಿಂಟ್ ಸ್ಪರ್ಧೆಗಳಲ್ಲಿ (100, 200 ಮತ್ತು 400 ಮೀಟರ್) ವಿಶ್ವ ಚಾಂಪಿಯನ್. ಸದ್ಯಕ್ಕೆ ಈತ ದಕ್ಷಿಣ ಆಫ್ರಿಕಾದ ಎರಡನೆ ಅತ್ಯಂತ ವೇಗದ ಓಟಗಾರ. ಅಂದರೆ ಒರಿಜಿನಲ್ ಕಾಲಿರುವ ಓಟಗಾರರನ್ನೂ ಹಿಂದಿಕ್ಕಿ ಓಡಿದವನು. ಮುಂದಿನ ಒಲಿಂಪಿಕ್ಸ್‌ನಲ್ಲಿ ಈತ ಭಾಗವಹಿಸಿ ಪದಕ ಗೆದ್ದರೆ ಅದಕ್ಕಿಂತ ದೊಡ್ಡ ದಾಖಲೆ ಬೇರೆ ಇರಲಿಕ್ಕಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65